

# ‘ವ್ರೂಗಿ’ ವಿದಾಯ

**ಸಚಿನ್ ಟೆಸ್ಟ್‌ನಿಂದ ನಿವೃತ್ತಿಯಾದಾಗ ಮುಂಬೈಕರ್ ದಾಖಲೆ ಮುರಿಯುವ ಭರವಸೆ ಮೂಡಿಸಿದ್ದ ಜಾಕ್ ಕಾಲಿಸ್ ಟೆಸ್ಟ್‌ಗೆ ದಿಢೀರ್ ನಿವೃತ್ತಿ ಪ್ರಕಟಿಸಿ ಅಚ್ಚರಿಗೆ ಕಾರಣವಾಗಿದ್ದಾರೆ.**

★ ಪ್ರಮೋದ್ ಜಿ.ಕೆ.

‘2015ರ ಏಕದಿನ ವಿಶ್ವಕಪ್‌ನಲ್ಲಿ ಆಡಬೇಕೆನ್ನುವ ಬಯಕೆ ಹೊಂದಿದ್ದೇನೆ. ಆದ ಕಾರಣ ಈ ನಿರ್ಧಾರ ಕೈಗೊಂಡಿದ್ದೇನೆ. ಟೆಸ್ಟ್ ಕ್ರಿಕೆಟ್‌ನಲ್ಲಿ 18 ವರ್ಷಗಳ ಕಾಲ ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸಲು ಸಾಧ್ಯವಾಗಿದ್ದು ಹೆಮ್ಮೆಯ ಸಂಗತಿ...’

–ಭಾರತ ಎದುರು ‘ಬಾಕ್ಸಿಂಗ್ ಡೇ’ ಟೆಸ್ಟ್ ಆರಂಭವಾಗಲು 24 ಗಂಟೆಯಷ್ಟೇ ಬಾಕಿ ಇದ್ದಾಗ ಶ್ರೇಷ್ಠ ಆಲ್‌ರೌಂಡರ್ ದಕ್ಷಿಣ ಆಫ್ರಿಕಾದ ಜಾಕ್ ಕಾಲಿಸ್ ಪ್ರಕಟಿಸಿದ ಅಚ್ಚರಿಯ ನಿವೃತ್ತಿ ನಿರ್ಧಾರವಿದು.

ನವೆಂಬರ್‌ನಲ್ಲಿ ಸಚಿನ್ ತೆಂಡೂಲ್ಕರ್ ಟೆಸ್ಟ್‌ಗೆ ವಿದಾಯ ಹೇಳಿದಾಗ ಮುಂಬೈಕರ್ ಟೆಸ್ಟ್ ಶತಕಗಳ ದಾಖಲೆ ಮುರಿಯುವವರು ಯಾರು ಎನ್ನುವ ಪ್ರಶ್ನೆಗೆ, ಕಾಲಿಸ್ ಉತ್ತರವಾಗಿ ನಿಂತಿದ್ದರು. ಆದರೆ, ಕಾಲಿಸ್ 2015ರ ಏಕದಿನ ವಿಶ್ವಕಪ್ ಆಡಬೇಕೆನ್ನುವ ಕಾರಣಕ್ಕಾಗಿ ಟೆಸ್ಟ್‌ನಿಂದ ದೂರ ಸರಿದಿದ್ದಾರೆ.

ಏಕದಿನ ಮತ್ತು ಟೆಸ್ಟ್ ಕ್ರಿಕೆಟ್‌ನಲ್ಲಿ 11000 ಕ್ಕಿಂತ ಹೆಚ್ಚು ರನ್ ಮತ್ತು 250ಕ್ಕೂ ಅಧಿಕ ವಿಕೆಟ್ ಪಡೆದ ಮೊದಲ ಆಲ್‌ರೌಂಡರ್ ಎನ್ನುವ ಕೀರ್ತಿಯನ್ನು ಕಾಲಿಸ್ ಹೊಂದಿದ್ದಾರೆ. ಟೆಸ್ಟ್‌ನಲ್ಲಿ ಸಚಿನ್ ದಾಖಲೆ ಮುರಿಯುತ್ತಾರೆ ಎನ್ನುವ ನಿರೀಕ್ಷೆ ಬಲವಾಗಿತ್ತು. ತೆಂಡೂಲ್ಕರ್ ಟೆಸ್ಟ್‌ನಲ್ಲಿ 51 ಶತಕ ಗಳಿಸಿದ್ದರೆ ಕಾಲಿಸ್ 44 ಶತಕ ಗಳಿಸಿದ್ದಾರೆ. ಮುಂಬೈಕರ್ ದಾಖಲೆ ಅಳಿಸಿ ಹಾಕಲು ಸನಿಹದಲ್ಲಿದ್ದವರು ಕಾಲಿಸ್ ಮಾತ್ರ.

2005ರಲ್ಲಿ ಐಸಿಸಿ ವರ್ಷದ ಟೆಸ್ಟ್ ಕ್ರಿಕೆಟಿಗ ಪ್ರಶಸ್ತಿ ಪಡೆದಿರುವ ಕಾಲಿಸ್ ಅವರು ಸಚಿನ್ (200 ಪಂದ್ಯ 15,921 ರನ್), ರಿಕಿ ಪಾಂಟಿಂಗ್ (168 ಟೆಸ್ಟ್, 13,378) ಮತ್ತು ರಾಹುಲ್ ದ್ರಾವಿಡ್ (164 ಟೆಸ್ಟ್, 13,288 ರನ್) ನಂತರ ಟೆಸ್ಟ್‌ನಲ್ಲಿ ಅತ್ಯಧಿಕ ರನ್ ಗಳಿಸಿದ ದಾಖಲೆ ಹೊಂದಿದ್ದಾರೆ.

1995ರ ಡಿಸೆಂಬರ್‌ನಲ್ಲಿ ಇಂಗ್ಲೆಂಡ್ ಎದುರು ಟೆಸ್ಟ್ ಕ್ರಿಕೆಟ್ ಬದುಕು ಆರಂಭಿಸಿದ್ದ ಕಾಲಿಸ್ 2013ರ ಡಿಸೆಂಬರ್‌ನಲ್ಲಿಯೇ ನಿವೃತ್ತಿಯಾದರು. ಬಲಗೈ ಬ್ಯಾಟ್ಸ್‌ಮನ್ ಮತ್ತು ಮಧ್ಯಮ ವೇಗಿಯ ಟೆಸ್ಟ್ ಪದಾರ್ಪಣೆ ಪಂದ್ಯ ಮತ್ತು ಕೊನೆಯ ಪಂದ್ಯಕ್ಕೂ ಡರ್ಬನ್‌ನ ಕಿಂಗ್ಸ್ ಮೇಡ್ ಕ್ರೀಡಾಂಗಣ ಸಾಕ್ಷಿಯಾಯಿತು.

ಕಾಲಿಸ್ ಆಡಿದ 165 (ಕೊನೆಯ ಟೆಸ್ಟ್ ಹೊರತುಪಡಿಸಿ) ಪಂದ್ಯಗಳಲ್ಲಿ ದಕ್ಷಿಣ ಆಫ್ರಿಕಾ 81 ಸಲ ಗೆಲುವು ಪಡೆದಿದ್ದು, 42 ಪಂದ್ಯಗಳು ಡ್ರಾ ಆಗಿವೆ.

ಈ ಆಟಗಾರ ಕ್ರಿಕೆಟ್ ಅಂಗಳದ ಜೊತೆ ಸಾಮಾಜಿಕ ಕಾರ್ಯಗಳಲ್ಲಿಯೂ ತೊಡಗಿದ್ದಾರೆ. ‘ಜಾಕ್ ಕಾಲಿಸ್ ಸ್ಕಾಲರ್‌ಷಿಪ್ ಫೌಂಡೇಷನ್’ ಸ್ಥಾಪಿಸಿ ವಿದ್ಯಾರ್ಥಿಗಳ ಓದಿಗೆ ಬೆಂಬಲವಾಗಿ ನಿಂತಿದ್ದಾರೆ. 2004 ರಲ್ಲಿ ಸುನಾಮಿ ಅಪ್ಪಳಿಸಿದಾಗ ಸಂತ್ರಸ್ತರಿಗೆ ನೆರವಾಗುವ ಉದ್ದೇಶದಿಂದ ಆಯೋಜಿಸಲಾಗಿದ್ದ ಸಹಾಯಾರ್ಥ ಕ್ರಿಕೆಟ್ ಪಂದ್ಯಕ್ಕೆ ವಿಶ್ವ ಇಲೆವೆನ್ ತಂಡದಲ್ಲೂ ಆಡಿದ್ದರು.

ಕಾಲಿಸ್ ಬೆಂಗಳೂರಿಗಂತೂ ತೀರಾ ಸನಿಹದವರೇ ಆಗಿದ್ದರು. ಅವರು ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ತಂಡದಲ್ಲಿ ಆಡಿದ್ದರು. ಜೊತೆಗೆ ಕಾಲಿಸ್ ಸಹೋದರಿ ಜನಿನಿ ಕಾಲಿಸ್ 2009ರಲ್ಲಿ ಐಪಿಎಲ್ ಚಿಯರ್ ಗರ್ಲ್ ಆಗಿ ಕೆಲಸ ಮಾಡಿದ್ದರು.

ಇಂಗ್ಲೆಂಡ್‌ನ ಮಾಜಿ ನಾಯಕ ಮೈಕಲ್ ವಾ ಅವರಿಂದ ‘ವಿಶ್ವ ಶ್ರೇಷ್ಠ ಆಲ್‌ರೌಂಡರ್’ ಎನಿಸಿಕೊಂಡಿರುವ ಕಾಲಿಸ್ ಮೊದಲು ಏಕದಿನ ಕ್ರಿಕೆಟ್‌ಗೆ ನಿವೃತ್ತಿ ಹೇಳಿ, ಕೆಲ ವರ್ಷ ಟೆಸ್ಟ್‌ನಲ್ಲಿ ಆಡುತ್ತಾರೆ ಎನ್ನುವ ನಿರೀಕ್ಷೆಯಿತ್ತು. ಆದರೆ, 39 ವರ್ಷದ ಅವರು ಹೋದ ವಾರ ಮೊದಲು ಟೆಸ್ಟ್‌ಗೆ ವಿದಾಯ ಹೇಳಿ ಅಚ್ಚರಿ ಮೂಡಿಸಿದ್ದಾರೆ. ‘ವ್ರೂಗಿ’ ಎಂಬ ನೆಚ್ಚಿನ ಹೆಸರು ಹೊಂದಿರುವ ಕಾಲಿಸ್ ಏಕದಿನ ಮತ್ತು ಟ್ವೆಂಟಿ–20 ಪಂದ್ಯಗಳನ್ನು ಆಡುತ್ತಾರೆ ಎನ್ನುವುದಷ್ಟೇ ಸಮಾಧಾನ.

